# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 74(92)

ಸದಸ್ಯರ ಹೆಸರು : ಶ್ರೀ. ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರಿಸುವ ಸಚಿವರು : ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

ಉತ್ತರಿಸಬೇಕಾದ ದಿನಾಂಕ : 27.01.2026

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಅಡಿಕೆ ಆರೋಗ್ಯಕ್ಕೆ ಹಾನಿಕಾರಕ ಎಂಬ ಅಪವಾದ ಕೇಳಿ ಬರುತ್ತಿದ್ದು ಅದನ್ನು ತೊಡೆದು ಹಾಕಲು ಪ್ರತಿಷ್ಟಿತ ಸಂಸ್ಥೆಗಳಿಂದ ವೈಜ್ಞಾನಿಕ ಸಂಶೋಧನೆ ನಡೆಸಬೇಕಾದ ತುರ್ತು ಅನಿವಾರ್ಯತೆ ಇದ್ದು ಈ ಸಂಬಂಧ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು; | ಅಡಿಕೆ ಕ್ಯಾನ್ಸರ್ ಕಾರಕ ಎಂಬ ಅಪವಾದ ತೊಡೆದುಹಾಕಲು ಪ್ರತಿಷ್ಟಿತ ಸಂಸ್ಥೆಗಳಿಂದ ಸಂಶೋಧನೆ ನಡೆಸಲು ಕೈಗೊಂಡ ಕ್ರಮಗಳು ಕೆಳಗಿನಂತಿವೆ.<br>1. ರಾಜ್ಯ ಸರ್ಕಾರದ ವತಿಯಿಂದ ಅಡಿಕೆ ಔಷಧೀಯ ಗುಣಗಳ ಬಗ್ಗೆ ದಾಖಲೆ ಆಧಾರದಲ್ಲಿ ತಿಳಿಸಲು ತೋಟಗಾರಿಕೆ ಇಲಾಖೆ ವತಿಯಿಂದ ಎಂ.ಎಸ್. ರಾಮಯ್ಯ ಬೆಂಗಳೂರು ಸಂಸ್ಥೆಯಲ್ಲಿ ಸಂಶೋಧನೆಯನ್ನು ಕೈಗೊಳ್ಳಲಾಗಿದೆ. ಎಂ.ಎಸ್.ರಾಮಯ್ಯ ವಿಶ್ವ ವಿದ್ಯಾನಿಲಯರವರು ನೀಡಿರುವ ವರದಿಯಲ್ಲಿ ಅಡಿಕೆಯು ಕ್ಯಾನ್ಸರ್ ಕಾರಕವಲ್ಲ ಎಂಬ ವಿಷಯದ ಬಗ್ಗೆ ಮತ್ತು ಅಡಿಕೆಯನ್ನು ತಂಬಾಕು ಅಥವಾ ಪಾನ ಮಸಾಲಗಳೊಂದಿಗೆ ಬಳಸದೆ ಇದ್ದಲ್ಲಿ ಹಾಗೂ ಮಿತ ಹಿತ ಪ್ರಮಾಣದಲ್ಲಿ ಸೇವನೆ ಮಾಡಿದ್ದಲ್ಲಿ ಅಪಾಯಕಾರಿಯಲ್ಲವೆಂಬುದು ವರದಿಯಾಗಿದೆ.<br>2. ಬಹುಸಂಸ್ಥೆಗಳನ್ನು ಒಳಗೊಂಡ "ಅಡಿಕೆ ಕುರಿತು ಸಾಕ್ಷ್ಯಾಧಾರ ಸಹಿತ ಸಂಶೋಧನೆ ಮತ್ತು ಮಾನವ ಆರೋಗ್ಯ" ಎಂಬ ಯೋಜನೆಯನ್ನು ರೂಪಿಸಿದೆ. ಈ ಯೋಜನೆಯಲ್ಲಿ 16 ರಾಷ್ಟ್ರ ಮತ್ತು ರಾಜ್ಯ ಮಟ್ಟದ ಸಸ್ಥೆಗಳಾದ Kasturba Medical College, Manipal, Council of Scientific and Industrial Research-National Botanical Research Institute, Lucknow, Council of Scientific and Industrial Research -Central Food Technological Research Institute, Mysuru, Indian Council of Agricultural Research - Central Plantation Crops Research Institute, kasragodu, NITTE University, Mangaluru, Council of Scientific and |
| ಆ) | ಅಂತರರಾಷ್ಟ್ರೀಯ ಮಟ್ಟದಲ್ಲಿ ಅಡಕೆ ಆರೋಗ್ಯಕ್ಕೆ ಹಾನಿಕಾರಕ ಎಂಬ ಋಣಾತ್ಮಕ ಭಾವನೆ ವ್ಯಕ್ತವಾಗುತ್ತಿರುವ ಹಿನ್ನಲೆಯಲ್ಲಿ ಅಡಕೆ ಉತ್ಪನ್ನಗಳ ಬಗ್ಗೆ ವ್ಯಾಪಕ ವೈಜ್ಞಾನಿಕ ಸಂಶೋಧನೆ ತಕ್ಷಣ ನಡೆಯಬೇಕಾದ ಅನಿವಾರ್ಯತೆ ಇದ್ದು, ಇದಕ್ಕೆ ಪೂರಕವಾಗಿ ನಡೆಯುತ್ತಿರುವ ಸದರಿ ವೈಜ್ಞಾನಿಕ ಸಂಶೋಧನೆಗಳ ಪ್ರಗತಿ ಪ್ರಸ್ತುತ ಯಾವ ಹಂತದಲ್ಲಿದೆ ಹಾಗೂ ಈ ಕುರಿತು ಸಂಶೋಧನೆ ಕೈಗೊಂಡಿರುವ ಸಂಸ್ಥೆಗಳು ಯಾವುವು (ಸಂಪೂರ್ಣ ವಿವರ ನೀಡುವುದು) | |

| | | |
|---|---|---|
| | | Industrial Research- Centre for Cellular & Molecular Biology, Hyderabad, National Institute of Mental Health and Neuro Sciences, Bengaluru, All India Institute of Medical Sciences, New Delhi, Shri Dharmasthala Manjunatheshwara University, Dharwad ಗಳನ್ನು ಒಳಗೊಂಡಿರುತ್ತದೆ. ಸದರಿ ಕಾರ್ಯಕ್ರಮದ ಮಾರ್ಗದರ್ಶನ ಮತ್ತು ಮೇಲ್ವಿಚಾರಣೆ ಮಾಡಲು ತೋಟಗಾರಿಕೆ ಅಯುಕ್ತರು, ರೈತರ ಕಲ್ಯಾಣ ಇಲಾಖೆ, ಭಾರತ ಸರ್ಕಾರ, ನಿರ್ದೇಶಕರು, ಕೇಂದ್ರ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆ, ಕಾಸರಗೋಡು, ಸಂಶೋಧನಾ ನಿರ್ದೇಶಕರು, ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ, ವಿಶ್ವವಿದ್ಯಾಲಯ, ದಾರವಾಡ, ನಿರ್ದೇಶಕರು, ಅಡಿಕೆ ಮತ್ತು ಸಾಂಬಾರು ಪದಾರ್ಥಗಳ ಅಭಿವೃದ್ಧಿ ನಿರ್ದೇಶನಾಲಯ, ಕ್ಯಾಲಿಕಟ್, ಕೇರಳ, ರವರುಗಳನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ.<br>ಈ ಯೋಜನೆಗೆ ಪ್ರಸ್ತುತ ರೂ. 3.64 ಕೋಟಿಗಳನ್ನು ಕೇಂದ್ರ ಸರ್ಕಾರವು ಬಿಡುಗಡೆ ಮಾಡಿರುತ್ತದೆ. ಯೋಜನೆಯು ಪ್ರಗತಿ ಹಂತದಲ್ಲಿರುತ್ತದೆ. |
| ಇ) | ನೂರಾರು ವರ್ಷಗಳಿಂದ ಜನರು ಅಡಿಕೆಯನ್ನು ಬಳಕೆ ಮಾಡುತ್ತಿದ್ದು, ಅಡಿಕೆ ಹಾನಿಕಾರಕವಲ್ಲ ಮತ್ತು ಕ್ಯಾನ್ಸರ್‌ಕಾರಕವಲ್ಲ ಎಂಬ ಸಂಗತಿಯನ್ನು ಸಾಭೀತು ಪಡಿಸುವುದರ ಜೊತೆಗೆ ಸಂಶೋಧನಾ ಸಂಸ್ಥೆಗಳ ನೆರವಿನಿಂದ ಅಡಿಕೆಯ ಔಷಧೀಯ ಮತ್ತು ಉತ್ತಮ ಗುಣಗಳ ಕುರಿತು ದಾಖಲೆಯ ಆಧಾರದಲ್ಲಿ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಪ್ರಚಾರ ಪಡಿಸಬೇಕಾದ ವ್ಯಾಪಕ ಅನಿವಾರ್ಯತೆ ಇದ್ದು, ಈ ಕುರಿತು ಸರ್ಕಾರ ಇದುವರೆಗೆ ತೆಗೆದುಕೊಂಡಿರುವ ಕ್ರಮಗಳೇನು: | ಸಂಶೋಧನೆ ಪ್ರಗತಿಯಲ್ಲಿದ್ದು, ಫಲಿತಾಂಶ ಮತ್ತು ದಾಖಲೆಗಳ ಅಧಾರದ ಮೇಲೆ ಪ್ರಚಾರ ಕೈಗೊಳ್ಳುವ ಬಗ್ಗೆ ಕ್ರಮವಹಿಸಲಾಗುವುದು. |
| ಈ) | ಅಂತರರಾಷ್ಟ್ರೀಯ ಮಟ್ಟದಲ್ಲಿ ಅಡಿಕೆ ಬಗ್ಗೆ ಋಣಾತ್ಮಕ ಭಾವನೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಅಡಿಕೆಯ ಔಷಧೀಯ ಮತ್ತು ಉತ್ತಮ ಗುಣಗಳನ್ನು ದಾಖಲೆಯ ಆಧಾರದಲ್ಲಿ | ಅಡಿಕೆ ಉತ್ಪನ್ನಗಳ ಕುರಿತು ಸಂಶೋಧನೆ ಕೈಗೊಂಡಿರುವ ವಿವರ ಕೆಳಗಿನಂತಿದೆ.<br>1. ಅಡಿಕೆ ಉತ್ಪನ್ನಗಳ ಸಂಶೋಧನೆಯನ್ನು ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವ |

| | | |
|---|---|---|
| | ತಿಳಿಸಲು ಅಡಿಕೆ ಉತ್ಪನ್ನಗಳ ಬಗ್ಗೆ ವ್ಯಾಪಕ ಸಂಶೋಧನೆಗೆ ಸರ್ಕಾರ ಈಗಲಾದರೂ ವ್ಯವಸ್ಥಿತ ಕ್ರಮವಹಿಸುವುದೇ? | ವಿದ್ಯಾಲಯ ಶಿವಮೊಗ್ಗ ವತಿಯಿಂದ ಕೈಗೊಳ್ಳಲಾಗುತ್ತಿದೆ.<br>2. ಅಡಿಕೆಯ ವಿವಿಧ ವರ್ಗಗಳ ಭೌತಿಕ ಮತ್ತು ಆಂತರಿಕ ಮಾನದಂಡಗಳ ಕುರಿತಾದ ಸಂಶೋಧನೆ ಪ್ರಗತಿಯಲ್ಲಿದೆ.<br>3. ಅಡಿಕೆ ಸಿಪ್ಪೆಯನ್ನು ಉತ್ತಮ ಕಾಂಪೋಸ್ಟ್ ಆಗಿ ಪರಿವರ್ತಿಸಲು ಕ್ರಮ ಕೈಗೊಳ್ಳಲಾಗಿದೆ. ಇದರಿಂದ ಸಾಮಾನ್ಯ ಕೊಟ್ಟಿಗೆ ಗೊಬ್ಬರಕ್ಕಿಂತಲು ಅಡಿಕೆ ಗೊಬ್ಬರದಲ್ಲಿ ಹೆಚ್ಚಿನ ಪೌಷ್ಟಿಕಾಂಶಗಳು ಕಂಡು ಬಂದಿದೆ.<br>4. ಜವಳಿ ಉದ್ಯಮದಲ್ಲಿ ಅಡಿಕೆ ಬಣ್ಣವನ್ನು ನೈಸರ್ಗಿಕ ಬಣ್ಣವಾಗಿ ಬಳಸಲಾಗುತ್ತಿದೆ. |

**ಸಂಖ್ಯೆ: HORTI 32 HGM 2026**

**(ಎಸ್. ಎಸ್. ಮಲ್ಲಿಕಾರ್ಜುನ್)**

**ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು**